**ಸಾಕ್ಷಿಯನ್ನು ದಿನಾಂಕಃ 13-06-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರವರಿಂದಃ**

ನಾನು ಪಿ.ಯು.ಸಿ ವರೆಗೆ ಕಲಿತಿದ್ದೇನೆ. 3 ನೇ ಪ್ರತಿವಾದಿ ನನಗೆ ಸಂಬಂದಿಕನಾಗಿರುವುದಿಲ್ಲ ಆದರ ಪರಿಚಯ ಇರುವರು. ಈ ದಾವೆಯನ್ನು ಯಾರು ಯಾರ ವಿರುದ್ದ ಸಲ್ಲಸಿರುವರು ನನಗೆ ಗೊತ್ತಿಲ್ಲ. ದಾವೆಯು ನಮ್ಮ ಹೊಲದ ಸಮೀಪ ಇರುವ ಹೊಲದ ಸಂಬಂದ ನಡೆದಿದ್ದು ಹೊಲದ ಸರ್ವೆ ನಂಬರು ನನಗೆ ಗೊತ್ತಿರುವುದಿಲ್ಲ. ದಾವಾ ಮನೆ ಮತ್ತು ಹೊಲ ಮೂಲತಃ ಯಾರಿಗೆ ಸೇರಿದು ಎಂದು ನನಗೆ ಗೊತ್ತಿಲ್ಲ. ನಾನು ವೀರಬಸಯ್ಯನ ತಂದೆ ಚಂದ್ರಶೇಖರಯ್ಯ ಇವರನ್ನು ನೋಡಿದ್ದೇನೆ. ದಾವಾ ಅಸ್ತಿಗಳು ಮೂಲತಃ ಚಂದ್ರಶೇಖರಯ್ಯ ಇವರಿಗೆ ಸಂಬಂದಿಸಿದ್ದು ಅಂದರೆ ಸರಿಯಲ್ಲ. ನನ್ನ ತಂದೆಯವರು ಖರೀದಿ ಕರಾರು ಪತ್ರಕ್ಕೆ ಸಹಿ ಹಾಕಿದ ವಿಚಾರವನ್ನು ಅವರು ಮೃತ ಪಡುವ ಸ್ವಲ್ಪ ದಿನಗಳ ಮುಂಚೆ ಹೇಳಿದರು. ನನ್ನ ತಂದೆ ದಿನಾಂಕ 04.04.2024 ರಂದು ಮೃತ ಪಟ್ಟರು. ಅದಕ್ಕಿಂತ 5-6 ವರ್ಷಗಳ ಹಿಂದೆ ನನ್ನ ತಂದೆ ಕರಾರು ಪತ್ರ ದಾಖಲೆ ವಿಚಾರವನ್ನು ನನಗೆ ಹೇಳಿರುವರು. ಆ ಖರೀದಿ ಕರಾರು ಪತ್ರವನುನ ಯಾರು ಯಾರಿಗೆ ಬರೆದುಕೊಟ್ಟರು ಎಂದು ನನ್ನ ತಂದೆ

**ಸಾಕ್ಷಿಯ ಸಹಿ**

ನನಗೆ ಹೇಳಿರುವುದಿಲ್ಲ ಮತ್ತು ಆ ಕುರಿತು ನನಗೆ ಮಾಹಿತಿ ಇರುವುದಿಲ್ಲ. ನನ್ನ ತಂದೆ ಖರೀದಿ ಕರಾರು ಪತ್ರದ ಕುರಿತು ಯಾವುದೇ ವಿಚಾರವನ್ನು ನನಗೆ ಹೇಳಿರುವುದ್ದಿಲ್ಲ ಅಂದರೆ ಸರಿಯಲ್ಲ. 3ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಅಂದರೆ ಸರಿಯಲ್ಲ. 3ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾದಿನದಲ್ಲಿ ಇರುವರು ಎಂದು ಆತ ಪರಿಚಯ ಇರುವ ಕಾರಣ ಮತ್ತು ಒಂದೇ ಊರಿನವರಾದ ಕಾರಣ ಸುಳ್ಳು ಹೇಳುತ್ತಿದೇನೆ ಅಂದರೆ ಸರಿಯಲ್ಲ. ಗಿರಿಜಮ್ಮ ಸತ್ತ ನಂತರ ಅಕೆಯ ಮಕ್ಕಳು ಸ್ವಾಧೀನದಲ್ಲಿರುವರು ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

13-06-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ.**

**ಸಾಕ್ಷಿಯ ಸಹಿ**